ಶ್ರೀ ಹೆಚ್.ಎಂ. ರೇವಣ್ಣ : ನಾನೇ ಅಲ್ಲಿಗೆ ಹೋಗಿ ಬಂದಿದ್ದೇನೆ. ಎಂ.ಸಿ.ಎಫ್. ಮತ್ತು ಜುವಾರಿಯಲ್ಲಿ ಸ್ಟಕ್ ಆಗಿದ್ದರಿಂದ ತೊಂದರೆಯಾಗಿದೆ. ಈಗ ಎಲ್ಲಾ ಸರಿಹೋಗಿದೆ. ಅದನ್ನು ಕಳುಹಿಸಿ ಕೊಡುತ್ತೇನೆ.

ಮುಳುಬಾಗಿಲು ತಾಲ್ಲೂಕಿನಲ್ಲಿ ರೈತರ ಬೆಳೆ ಪರಿಹಾರ

577 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಉತ್ತನೂರು ದೊಡ್ಡಕೆರೆ ಅಚ್ಚುಕಟ್ಟಿನಲ್ಲಿ ಕೊಯ್ಲಿಗೆ ಬಂದಿದ್ದ ಭತ್ತದ ಬೆಳೆ ಮೇಲೆ ಆಲಿಕಲ್ಲು ಬಿದ್ದು ಎಷ್ಟು ಮಂದಿ ರೈತರಿಗೆ ಮತ್ತು ಎಷ್ಟು ಎಕರೆಗಳಿಗೆ ನಷ್ಟ ಉಂಟಾಗಿದೆ ಹಾಗೂ ಇದರ ಅಂದಾಜು ಮೊತ್ತವೆಷ್ಟು?

ಆ) ಇದುವರೆವಿಗೂ ನೀಡಿರುವ ಪರಿಹಾರ ಹಣವೆಷ್ಟು?

ಇ) ಉಳಿಕೆ ಪರಿಹಾರ ಹಣ ಯಾವಾಗ ಬಿಡುಗಡೆ ಮಾಡಲಾಗುವುದು.

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು) :

ಅ) ಮುಳಬಾಗಲು ತಾಲ್ಲೂಕು ದುಗ್ಗಸಂದ್ರ ಹೋಬಳಿ ಉತ್ತನೂರು ಗ್ರಾಮದ ದೊಡ್ಡ ಕೆರೆ ಅಚ್ಚುಕಟ್ಟು 324 ಎಕರೆ 31 ಗುಂಟೆಯಲ್ಲಿ ದಿನಾಂಕ 22-5-94ರಂದು ಬಿದ್ದ ಆಲಿಕಲ್ಲು ಮಳೆಯಿಂದ ಸುಮಾರು 200 ರಿಂದ 250 ಎಕರೆ ಪ್ರದೇಶದಲ್ಲಿ ಬೇಸಿಗೆ ಬೆಳೆಯಾದ ಭತ್ತದ ಬೆಳೆ ಹಾನಿಯಾಗಿರುತ್ತದೆ. ಇದರಿಂದಾಗಿ 97 ಜನ ರೈತರಿಗೆ ನಷ್ಟವಾಗಿದೆ ಎಂದು ತಿಳಿದು ಬಂದಿದೆ. ನಷ್ಟವಾದ ಮೊತ್ತವು 17060 ರೂ.ಗಳಾಗಿರುತ್ತದೆ.

ಆ) ದಿನಾಂಕ 24-8-94 ರಂದು ಚೆಕ್ಕಿನ ಮೂಲಕ 17060 ರೂಪಾಯಿಗಳನ್ನು ತಹಶೀಲ್ದಾರರು ಮುಳಬಾಗಲು ತಾಲ್ಲೂಕು ಇವರಿಗೆ ರೈತರಿಗೆ ವಿತರಣೆ ಮಾಡಲು ಬಿಡುಗಡೆ ಮಾಡಲಾಗಿದೆ.

ಇ) ಈಗಾಗಲೇ ಪೂರ್ತಿ ಹಣವನ್ನು ಬಿಡುಗಡೆ ಮಾಡಿರುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

4.10 ಪಿ.ಎಂ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳೇ ಉತ್ತನೂರು ಗ್ರಾಮಕ್ಕೆ ಬಂದು ರೈತರ ಗೋಳನ್ನು ನೋಡಿದ್ದಾರೆ. ಇವರು ಕೊಟ್ಟಿರುವಂತಹ 17,000 ರೂಪಾಯಿಗಳು ಏನಿದೆ. ಅದು ಒಟ್ಟು 250 ಎಕರೆಗೆ ಆದರಲ್ಲಿ ಒಂದು ಎಕರೆಗೆ 68 ರೂ.ಗಳು ಬರುತ್ತದೆ. ತೋಟಿ ತಳವಾರರು ನಿರ್‌ಗಂಟಿಗಳಿದ್ದಾರಲ್ಲಾ ಅವರಿಗೂ ಸಾಲುವುದಿಲ್ಲ. ಸಾಮಾನ್ಯವಾಗಿ ಭತ್ತ ಬೆಳೆಯಬೇಕಾದರೆ 1 ಎಕರೆಗೆ 5 ಸಾವಿರ ರೂ.ಗಳು ಖರ್ಚು ಆಗುತ್ತದೆ. ಆದರೆ ನೀವು 68 ರೂ.ಗಳನ್ನು ಕೊಟ್ಟರೆ ಯಾವ ಮೂಲೆಗೆ, ಒಂದು ಕೆಲಸ ಮಾಡಿ ನೀವು ಕೊಟ್ಟಿರುವ 17 ಸಾವಿರ ರೂ.ಗಳನ್ನು ವಾಪಸ್ಸು ಕೊಟ್ಟು ಬಿಡುತ್ತೇವೆ; ದಯವಿಟ್ಟು ತೆಗೆದುಕೊಂಡು ಬಿಡಿ.

ಶ್ರೀ ಹೆಚ್.ಎಂ. ರೇವಣ್ಣ : ನಾನು ಹೋಗಿದ್ದುದು ನಿಜ, ನಾನೂ ನೋಡಿದ್ದೇನೆ. ಅದನ್ನು ನನ್ನ ಇಲಾಖೆಯಿಂದ ನೇರವಾಗಿ ಕೊಡುವುದಕ್ಕೆ ಬರುವುದಿಲ್ಲ. ರೆವಿನ್ಯೂ ಇಲಾಖೆಯವರು ಕಂದಾಯ ಇಲಾಖೆಯವರು ಇದಕ್ಕೆ ಪರಿಹಾರ ಕೊಡತಕ್ಕದ್ದು. ರೈತರ ಬಗ್ಗೆ ನಾನು ನಿಮಷ್ಟೇ ಕಾಳಜಿ ಇರುವವನು, ಆದರೆ ನನ್ನ ಇಲಾಖೆಯಿಂದ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಪ್ರಕೃತಿ ವಿಕೋಪಕ್ಕೆ ತುತ್ತಾದಂತಹ ಪ್ರದೇಶಗಳಿಗೆ ಹೆಚ್ಚಿಗೆ ಹಣವನ್ನು ಕೊಡುತ್ತಾರೆ. ಅದಕ್ಕೋಸ್ಕರ ತಾವು ಕಂದಾಯ ಇಲಾಖೆಗೆ ರೆಕಮೆಂಡ್ ಮಾಡುತ್ತೀರಾ? ನ್ಯಾಯವಾಗಿ ಎಷ್ಟು ರೂಲ್ಸ್ ಪ್ರಕಾರ ಕೊಡಬೇಕೋ ಅದನ್ನು ಕೊಡಿಸುವ ಪ್ರಯತ್ನ ಮಾಡುತ್ತೀರಾ?

ಶ್ರೀ ಹೆಚ್.ಎಂ. ರೇವಣ್ಣ : ಅದನ್ನು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಪ್ರಯತ್ನ ಅಲ್ಲ, ಬರೆಯುತ್ತೇನೆ ಎಂದು ಹೇಳಿ.

ಶ್ರೀ ಹೆಚ್.ಎಂ. ರೇವಣ್ಣ : ಆಯಿತು ಬರೆಯುತ್ತೇನೆ.

ಗಡಿ ಪ್ರದೇಶಗಳಲ್ಲಿ ವ್ಯವಸಾಯೋತ್ಪನ್ನ ಮಾರುಕಟ್ಟೆಗಳ ಸಂಖ್ಯೆ

395 -, ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಅಂಕಿಅಂಶಗಳನ್ನು ಒದಗಿಸುವುದು);

ಆ) ಈ ಸಮಿತಿಗಳಲ್ಲಿ ರಾಜ್ಯದ ಗಡಿ ಭಾಗಗಳಲ್ಲಿ ಬರುವ ಸಮಿತಿಗಳ ಸಂಖ್ಯೆ ಎಷ್ಟು;

ಇ) ರಾಜ್ಯದ ಬಹುತೇಕ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳು ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿ ಮುಚ್ಚುವ ಸ್ಥಿತಿಗೆ ಬಂದಿರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳ ಪುನರುಜ್ಜೀವನಕ್ಕಾಗಿ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ?

ಶ್ರೀ ರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) 123 (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ)

ಆ) ರಾಜ್ಯದ ಗಡಿಗೆ ಅತಿ ಸಮೀಪದಲ್ಲಿರುವ ಮಾರುಕಟ್ಟೆ ಸಮಿತಿಗಳು-17.

ಇ) ಇಲ್ಲ.

ಈ) (ಇ) ಭಾಗಕ್ಕೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ -1

ಕರ್ನಾಟಕ ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವಿವರಣಾ ಪಟ್ಟಿ

ಜಿಲ್ಲೆಯ ಹೆಸರು	ಮಾರುಕಟ್ಟೆ ಸಮಿತಿಯ ಹೆಸರು
ಬೆಂಗಳೂರು ನಗರ	1. ಬೆಂಗಳೂರು
ಬೆಂಗಳೂರು ಗ್ರಾಮಾಂತರ	2. ಚನ್ನಪಟ್ಟಣ
	3. ದೊಡ್ಡಬಳ್ಳಾಪುರ
ಚಿತ್ರದುರ್ಗ	4. ಚಿತ್ರದುರ್ಗ
	5. ಚಳ್ಳಕೆರೆ